# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2588/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 16/11/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ವಿಘ್ನೇಶ್ವರ, ಕಿರಿಮಂಜೇಶ್ವರ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

1. ದೂರುದಾರರಾದ ಶ್ರೀ ವಿಘ್ನೇಶ್ವರ, ಕಿರಿಮಂಜೇಶ್ವರ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ರವರು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಿರಿಮಂಜೇಶ್ವರ ಗ್ರಾಮ ಪಂಚಾಯತ್, ಕಿರಿಮಂಜೇಶ್ವರ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ದೂರು ಸಲ್ಲಿಸಿ, ಶ್ರೀ ಸುಂದರ ದೇವಾಡಿಗ ಎಂಬುವರು ಕಿರಿಮಂಜೇಶ್ವರ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿ ಕಿರಿಮಂಜೇಶ್ವರ ಗ್ರಾಮದ ಸ.ನಂ.224/5ಸಿ 0.1 ಎಕರೆ ಜಮೀನಿನಲ್ಲಿ ಮನೆ ಕಟ್ಟಲು ಪರವಾನಿಗೆ ತೆಗೆದುಕೊಂಡು, ಅದೇ ಗ್ರಾಮದ ಸ.ನಂ.235/3ರ 0.36 ಎಕರೆ ಸ್ಥಳದಲ್ಲಿ ಮನೆ ಕಟ್ಟಿರುತ್ತಾರೆ ಹಾಗೂ ಸದರಿ ಸ್ಥಳವು ರಾಷ್ಟ್ರೀಯ ಹೆದ್ದಾರಿಗೆ ತಾಗಿಕೊಂಡಿರುತ್ತದೆ ಹಾಗೂ ಕುಸುಮಾ ಇಲೆಕ್ಟ್ರೀಕಲ್ಸ್ ಕಟ್ಟಡದ ಹಿಂಭಾಗದಲ್ಲಿರುತ್ತದೆ. ಈ ಅಕ್ರಮದ ಬಗ್ಗೆ ಎದುರುದಾರರಿಗೆ ಅವರ ಗಮನಕ್ಕೆ ತಂದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಇದಲ್ಲದೆ, ಶ್ರೀ ಸುಂದರ ದೇವಾಡಿಗ ಇವರ ಕಟ್ಟಡಕ್ಕೆ ಒಂದೇ ದಿನದಲ್ಲಿ ಕಟ್ಟಡ ಪರವಾನಗೆಯನ್ನು ನೀಡಿರುತ್ತಾರೆ. ಇದರಿಂದ ಎದುರುದಾರರು ಶ್ರೀ ಸುಂದರ ದೇವಾಡಿಗ ಇವರ ಅಕ್ರಮದಲ್ಲಿ ಶಾಮೀಲಾಗಿರುವುದಾಗಿ ಕಂಡು ಬರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಹಾಗೂ ಅಕ್ರಮ ಕಟ್ಟಡದ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯ ಅಂಶಗಳು ಈ ಕೆಳಕಂಡಂತೆ ಇರುತ್ತದೆ:-

ದಿನಾಂಕ 8/10/2013 ರಿಂದ 21/07/2015ರ ತನಕ ನಾನು ಗ್ರಾಮ ಪಂಚಾಯತ್ ಕಿರಿಮಂಜೇಶ್ವರ ಇಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದೆನು. ದೂರಿನಲ್ಲಿ ಹೇಳಿಕೊಂಡ ವಿಚಾರಗಳೆಲ್ಲ ತಪ್ಪು ಕಲ್ಪನೆಯಿಂದ ಕೂಡಿದವುಗಳು ಮತ್ತು ಅವುಗಳಲ್ಲಿ ಯಾವುದೇ ಸತ್ಯಾಂಶ ಇರುವುದಿಲ್ಲ.

ಫಿರ್ಯಾದಿದಾರರ ಫಿರ್ಯಾದಿಗೆ ಸಂಬಂಧಪಟ್ಟಂತೆ ನಾನು ಭಿನ್ನವಿಸಿಕೊಳ್ಳುವುದೇನೆಂದರೆ ಯಾವುದೇ ಒಬ್ಬ ವ್ಯಕ್ತಿ ತಮ್ಮ ಬಾಬ್ತು ಸ್ಥಿರಾಸ್ತಿಯ ಭಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಪಂಚಾಯತ್ ಅನುಮತಿ ಕೋರಿ ಅರ್ಜಿ ಸಲ್ಲಿಸಿದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಂತೆ ಆತ ಪಂಚಾಯತ್‌ಗೆ ಸಲ್ಲಿಸಿರುವ ಸ್ಥಿರಾಸ್ತಿಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ಹಾಗೂ ಇಂಜಿನಿಯರ್‌ರವರು ನೀಡಿರುವ ನಕ್ಷೆ ಇತ್ಯಾದಿಗಳನ್ನು ಪರಿಶೀಲಿಸಿ ಅವುಗಳು ಕ್ರಮಬದ್ಧವಾಗಿದ್ದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅದನ್ನು ಸದರಿ ಪಂಚಾಯತ್‌ನ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸತಕ್ಕದ್ದು. ಪಂಚಾಯತ್ ಆಡಳಿತ ಮಂಡಳಿ ಸದರಿ ದಾಖಲೆಗಳನ್ನು ಆಧರಿಸಿ ನಿಬಂಧನೆಗಳಿಗೆ ಒಳಪಟ್ಟು ಕಟ್ಟಡ ರಚನೆ ಬಗ್ಗೆ ಪರವಾನಿಗೆ ನೀಡಲು ನಿರ್ಣಯ ಕೈಗೊಳ್ಳುತ್ತಾರೆ. ಆ ರೀತಿ ಪರವಾನಿಗೆ ನೀಡಬೇಕು ವ ನೀಡಬಾರದು ಎನ್ನುವ ನಿರ್ಣಯ ಕೈಗೊಳ್ಳುವುದು ಗ್ರಾಮ ಪಂಚಾಯತ್ ಆಡಳಿತ ಮಂಡಳಿಯ ಪರಮಾಧಿಕಾರವಾಗಿದೆ. ಗ್ರಾಮ ಪಂಚಾಯತ್ ಕಾಯ್ದೆ ಕಲಂ 64 ರಂತೆ ಆ ರೀತಿ ನಿರ್ಣಯ ಕೈಗೊಳ್ಳುವ ಅಧಿಕಾರಹೊಂದಿದ್ದು, ಆ ರೀತಿ ಪಂಚಾಯತ್ ಕೈಗೊಳ್ಳುವ ನಿರ್ಣಯದಿಂದ ಯಾರಾದರೂ ತೊಂದರೆಗೆ ಒಳಗಾಗಿದ್ದಲ್ಲಿ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಕಲಂ 64(5)ರಂತೆ ಸಂಬಂಧಿಸಿದ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿ ಸದರಿ ನಿರ್ಣಯವನ್ನು ಪ್ರಶ್ನಿಸಬಹುದು ಮತ್ತು ನ್ಯಾಯಬದ್ಧ ಕಾರಣಗಳಿದ್ದಲ್ಲಿ ಅದನ್ನು ರದ್ದುಗೊಳಿಸಿಕೊಳ್ಳಬಹುದು. ಫಿರ್ಯಾದಿದಾರರು ಹೇಳಿಕೊಂಡಂತೆ ಪರವಾನಿಗೆ ಯಾವ ಆಸ್ತಿಗೆ ಸಂಬಂಧಿಸಿದಂತೆ ಪಡೆಯಲಾಗಿದೆಯೋ ಅದನ್ನು ಬಿಟ್ಟು ಬೇರೆ ಆಸ್ತಿಯಲ್ಲಿ ಕಟ್ಟಡ ನಿರ್ಮಿಸಿದಲ್ಲಿ ಅಥವಾ ಇನ್ನಿತರ ಯಾವುದೆ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಿಸಿದ ವ್ಯಕ್ತಿಗಳು ವ ಅದರಿಂದ ತೊಂದರೆಗಾದ ವ್ಯಕ್ತಿಗಳು ವ ಇತರ ಯಾರೂ ಸಹ ಆ ವಿಚಾರವನ್ನು ಪಂಚಾಯತ್‌ನ ಗಮನಕ್ಕೆ ತಂದಲ್ಲಿ ಗ್ರಾಮ ಪಂಚಾಯತ್ ಸದರಿ ಪರವಾನಿಗೆಯನ್ನು ತಡೆಹಿಡಿಯಲು ಮತ್ತು ಆರೋಪ ನಿಜವೆಂದು ಕಂಡು ಬಂದಲ್ಲಿ ಪರವಾನಿಗೆಯನ್ನು ರದ್ದುಪಡಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಲು ಆದೇಶ ಮಾಡಲು ಸಹ ಅಧಿಕಾರ ಹೊಂದಿದೆ.

ಸದರಿ ಶ್ರೀ ಸುಂದರ ದೇವಾಡಿಗ ಇವರು ಯಾವ ಸ್ಥಳದಲ್ಲಿ ಕಟ್ಟಡ ನಿರ್ಮಿಸಲು ಪರವಾನಿಗೆ ಪಡೆದಿದ್ದರೋ ಅದೇ ಸ್ಥಳದಲ್ಲಿ ಕಟ್ಟಡ ನಿರ್ಮಿಸಿದ್ದಾಗಿ ಪಂಚಾಯತ್‌ಗೆ ಮಾಹಿತಿ ನೀಡಿದ್ದು ಅದನ್ನು ಆಧರಿಸಿ ಪಂಚಾಯತ್ ಅವರಿಗೆ ವಿದ್ಯುತ್ ಸಂಪರ್ಕ ಇತ್ಯಾದಿಹೊಂದಲು ನಿರಾಕ್ಷೇಪಣಾ ಪತ್ರ ಇತ್ಯಾದಿಯನ್ನು ನೀಡಿತ್ತು. ಶ್ರೀ ಸುಂದರ ದೇವಾಡಿಗ ಇವರು ಯಾವ ಸ್ಥಳದ ಬಾಬ್ತು ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ

*ಪಡೆದಿದ್ದರೋ ಆ ಸ್ಥಳ ಬಿಟ್ಟು ಬೇರೆ ಸ್ಥಳದಲ್ಲಿ ಕಟ್ಟಡ ನಿರ್ಮಿಸಿದ್ದಾರೆ ಎನ್ನುವ ಬಗ್ಗೆ ಗ್ರಾಮ ಪಂಚಾಯತ್‌ಗೆ ಅಥವಾ ಅದರ ಯಾವುದೇ ಸಿಬ್ಬಂದಿ ವ ಅಧಿಕಾರಿಗಳಿಗೆ ಯಾರೂ ಸಹ ಯಾವುದೇ ಮಾಹಿತಿ ವ ದೂರನ್ನು ಸಲ್ಲಿಸಿರುವುದಿಲ್ಲ ಎಂದು ನಮೂದಿಸಿರುತ್ತಾರೆ.*

3. ಎದುರುದಾರರ ಆಕ್ಷೇಪಣೆಯ ಮೇರೆಗೆ ದೂರುದಾರರ ಪ್ರತ್ಯುತ್ತರ ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

4. ದೂರಿನೊಂದಿಗೆ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಪರವಾನಗೆಯನ್ನು ಕಿರಿಮಂಜೇಶ್ವರ ಗ್ರಾಮ ಸರ್ವೆ ನಂಬರ್ 224/5ಸಿ ಯಲ್ಲಿ ವಾಸೋಪಯೋಗಿ ಮನೆ ಕಟ್ಟಲು ನೀಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ವಿದ್ಯುತ್ ಸಂಪರ್ಕ ಪಡೆದ ದಾಖಲೆಗಳನ್ನು ಪರಿಶೀಲಿಸಲಾಗಿ ಅದೇ ಗ್ರಾಮದ ಸರ್ವೆ ನಂಬರ್ 235/3ರ ಜಮೀನಿನಲ್ಲಿ ವಾಸೋಪಯೋಗಿ ಮನೆ ಕಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಕುಂದಾಪುರ ತಾಲ್ಲೂಕು, ಕಿರಿಮಂಜೇಶ್ವರ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಶ್ರೀ ಸುಂದರ ದೇವಾಡಿಗರ ಈ ರೀತಿ ಅಕ್ರಮ ಎಸಗಿದ ಬಗ್ಗೆ ಹಾಗೂ ಕ್ರಮ ಜರುಗಿಸುವ ಬಗ್ಗೆ ದೂರನ್ನು ದಿನಾಂಕ 09/08/2016 ರಲ್ಲಿ ಸಲ್ಲಿಸಿದ್ದರೂ ಈವರೆಗೆ ಕ್ರಮ ಜರುಗಿಸಿದ ಬಗ್ಗೆಯಾಗಲೀ ಅಥವಾ ಸರ್ವೆ ನಂಬರ್ 235/3ರ ವಾಸೋಪಯೋಗಿ ಮನೆಗೆ ಪರವಾನಗಿ ಪಡೆದಿದ್ದಾರೆಂದಾಗಲೀ ಎದುರುದಾರರು ತಮ್ಮ ಆಕ್ಷಪಣೆಯಲ್ಲಿ ಯಾವುದೇ ಮಾಹಿತಿ ನೀಡಿರುವುದಿಲ್ಲ. ಪರವಾನಗಿ ನೀಡಿದ ಸ್ಥಳ ಬಿಟ್ಟು ಬೇರೆ ಸ್ಥಳದಲ್ಲಿ ಮನೆ ಕಟ್ಟಿದ ಮಾಹಿತಿಯನ್ನು ಯಾರೂ ನೀಡಿಲ್ಲ ಎಂದು ಹೇಳಿದ್ದು, ಸದರಿ ಶ್ರೀ ಸುಂದರ ದೇವಾಡಿಗರವರು ಪರವಾನಗಿ ಪಡೆದ ಸ್ಥಳದಲ್ಲಿ ಮನೆ ಕಟ್ಟದೆ ಬೇರೆ ಸ್ಥಳದಲ್ಲಿ ಕಟ್ಟಿದ ಬಗ್ಗೆ ನೇರವಾಗಿ ಒಪ್ಪಿಕೊಂಡಿರುತ್ತಾರೆ. ಕಾರಣ, ಸದರಿ ಶ್ರೀ ಸುಂದರ ದೇವಾಡಿಗ ರವರು ಅಕ್ರಮವಾಗಿ ಕಟ್ಟಿದ ಕಟ್ಟಡವನ್ನು ತಡೆಯಲು ಹಾಗೂ ಅಕ್ರಮ ಕಟ್ಟಡವನ್ನು ತೆರವುಗೊಳಿಸುವ ಕಾರ್ಯವನ್ನು ಎದುರುದಾರರು ಕೈಗೊಳ್ಳದೇ ಇರುವುದು ಕಂಡು ಬರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಕುಂದಾಪುರ ತಾಲ್ಲೂಕು, ಕಿರಿಮಂಜೇಶ್ವರ ಗ್ರಾಮದ ಸ.ನಂ.235/3ರ 0.36 ಎಕರೆ ಸ್ಥಳದಲ್ಲಿ ಶ್ರೀ ಸುಂದರ ದೇವಾಡಿಗ ರವರು ಪರವಾನಗೆ ಇಲ್ಲದೆ ಕಟ್ಟಿರುವ ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು,

ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 16.11.17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**